

**ತಮಿಳುನಾಡಿದ ‘ಧರಸುರಂ’ ಯುನೆಸ್ಕೋದ ವಿಶ್ವ ಸಾಂಸ್ಕೃತಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿರುವ, ಶಿಲ್ಪಕಲಾ ವೈಭವದ ಅಪೂರ್ವ ತಾಣ.**

■ ಡಾ. ಎನ್. ಸ್ವಾತಿ

# ಶಿಲೆಗಳು ಸಂಗೀತವ ಹಾಡಿವೆ...



ತಮಿಳುನಾಡು ಹಲವಾರು ಪ್ರವಾಸಿತಾಣಗಳಿಗೆ ಹೆಸರುವಾಸಿ. ಕೋಟೆ, ದೇವಾಲಯಗಳು, ಉದ್ಯಾನಗಳು, ವನ್ಯಜೀವಿ ಧಾಮಗಳು, ನಯನ ಮನೋಹರ ಜಲಪಾತಗಳು – ಹೀಗೆ ತಮಿಳು ನೆಲದ ಆಕರ್ಷಣೆಗಳು ಒಂದೆರಡಲ್ಲ. ಪ್ರವಾಸದಲ್ಲಿ ದೇಗುಲ ದರ್ಶನದ ಪುಣ್ಯವೂ ಸಿಗಬೇಕು, ಕಣ್ಣಿಗೆ ತಂಪನ್ನುಂಟು ಮಾಡುವ ಪರಿಸರವೂ ಇರಬೇಕೆಂದಿದ್ದರೆ ‘ಧರಸುರಂ’ ಹೇಳಿ ಮಾಡಿಸಿದ ಸ್ಥಳ.

ಧರಸುರಂನ ಪ್ರಮುಖ ಆಕರ್ಷಣೆ ಐರಾವತೀಶ್ವರ ದೇಗುಲ. ದೇಗುಲದ ಅಂಗಳದಲ್ಲಿ ನಿಂತರೆ ಕಾಣಿಸುವ ಪ್ರಶಾಂತವಾದ ವಾತಾವರಣ, ತಣ್ಣನೆ ಬೀಸುವ ಗಾಳಿ, ಕಣ್ಣಿಗೆ ಹಬ್ಬವನ್ನುಂಟು ಮಾಡುವ ಹಸಿರರಾಶಿ ನಮ್ಮನ್ನು ಹೊಸದೊಂದು ಲೋಕಕ್ಕೆ ಕೊಂಡೊಯ್ಯುತ್ತದೆ.